MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - MONDAY 13-6-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ 2 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ

ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಹಿಂದಿನ 2 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿದು ಟನ್‌ಗೆ MYR 6000 ಕ್ಕೂ ಕೆಳಗಿಳಿದಿದೆಯೆನ್ನಲಾಗಿದೆ. ಇಂಡೋನೇಶೀಯಾ ರಫ್ತು ನಿರ್ಬಂಧದ ನಂತರ ರಫ್ತು ಉತ್ತೇಜಿಸಿ ವೇಗ ವರ್ಧಿಸಲು 1 ಮಿಲಿಯನ್ ಟನ್ ಕಚ್ಚಾ ಪಾಮೆಣ್ಣೆ ರಫ್ತು ಮಾಡಲು ಯೋಜಿಸಿದೆಯೆನ್ನಲಾಗಿದೆ. ರಫ್ತು ತೆರಿಗೆ ಹಾಗೂ ಲೆವಿಯನ್ನು 575 ಡಾಲರ್‌ಗಳಿಂದ 488 ಡಾಲರ್(ಟನ್)ಗಳಿಗಿಳಿಸಿದೆ. ಮೇ ತಿಂಗಳ ಮಲೇಶಿಯನ್ ಪಾಮೆಣ್ಣೆ ದಾಸ್ತಾನು ಎಪ್ರಿಲ್‌ಗೆ ಹೋಲಿಸಿದಾಗ 7.37 ಶೇಕಡಾ ಇಳಿಕೆಯಾಗಿ 1.52 ಮಿಲಿಯನ್ ಟನ್‌ಗಳಿಗೆ ಇಳಿಕೆಯಾಗಿದೆಯೆನ್ನಲಾಗಿದೆ. ಹಿಂದಿನ 6 ತಿಂಗಳ ಕನಿಷ್ಠ ಮಟ್ಟಕ್ಕೆ ಮಾಸಾಂತ್ಯದ ದಾಸ್ತಾನು ಇಳಿಕೆಯಾಗಿದೆ. ರಫ್ತು ಡಿಸೆಂಬರ್ ನಂತರ ಗರಿಷ್ಠ ಹೆಚ್ಚಳ ಕಂಡು (26.87 ಶೇಕಡಾ) 1.37 ಮಿಲಿಯನ್ ಟನ್‌ಗಳಿಗೇರಿದೆ. ಉತ್ಪಾದನೆ 33.9 ಶೇಕಡಾ ಇಳಿಕೆಯಾಗಿ 1.46 ಮಿಲಿಯನ್ ಟನ್‌ಗಳಿಗೆ ಇಳಿಕೆ. ಇಂಡೋನೇಶಿಯಾದ ರಫ್ತು ವೇಗ ವರ್ಧಿಸುವ ಯೋಜನೆಗಳಿಂದ ಮಲೇಶ್ಯಾದ ಜೂನ್ ತಿಂಗಳ ರಫ್ತು ವೇಗ ಇಳಿಕೆಯಾಗುವ ಸಾಧ್ಯತೆಯಿದೆ. ದರವೂ ಇಳಿಕೆಯಾಗುವ ಸಾಧ್ಯತೆಯಿದೆ.

## ಪಾಮೆಣ್ಣೆ ಫ್ಯೂಚರ್ ದರ 4 ಶೇಕಡಾ ಇಳಿಕೆ

ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಗುರುವಾರ (9/6) 4 ಶೇಕಡಾ ಇಳಿಕೆ ಕಂಡು ಹಿಂದಿನ 3 ವಾರಗಳಲ್ಲಿ ದಿನದ ಗರಿಷ್ಠ ಇಳಿಕೆ ಕಂಡಿದೆ. ಇಂಡೋನೇಶಿಯಾ ರಫ್ತು ವೇಗಗೊಳಿಸಲು 1 ಮಿಲಿಯನ್ ಟನ್ ಕಚ್ಚಾ ಪಾಮೆಣ್ಣೆ ರಫ್ತು ಮಾಡಲು ಕಾರ್ಯ ಯೋಜನೆಗೊಳಿಸಿರುವುದು ಹಾಗೂ ಚೈನಾದಲ್ಲಿ ಕೋವಿಡ್ 19 ನ ಹೊಸ ನಿರ್ಬಂಧಗಳು ಮಲೇಶೀಯಾದ ಪಾಮೆಣ್ಣೆ ಫ್ಯೂಚರ್ ದರ ಇಳಿಕೆಯ ಕಾರಣಗಳೆನ್ನಲಾಗಿದೆ.

## ಯು.ಎಸ್.ಸೋಯಬೀನ್ ರಫ್ತು ಹೆಚ್ಚಳ

ಯು.ಎಸ್.ಸೋಯಬೀನ್ ರಫ್ತು ಹಿಂದಿನ ನಾಲ್ಕು ವಾರಗಳ ಸರಾಸರಿ ರಫ್ತಿಗಿಂತ 41 ಶೇಕಡಾ ಹೆಚ್ಚಳವಾಗಿ 429,900 ಟನ್‌ಗಳಾಗಿವೆಯೆನ್ನಲಾಗಿದೆ. ಚೈನಾ ಎಪ್ರಿಲ್ ತಿಂಗಳ ಆಮದಿಗಿಂತ ಮೇ ತಿಂಗಳಲ್ಲಿ 20 ಶೇಕಡಾ ಹೆಚ್ಚು ಆಮದು ಮಾಡಿಕೊಂಡಿದೆಯೆನ್ನಲಾಗಿದೆ. ಎಪ್ರಿಲ್‌ನಲ್ಲಿ 8.08 ಮಿಲಿಯನ್ ಟನ್ ಆಗಿದ್ದ ಆಮದು ಮೇಯಲ್ಲಿ 9.67 ಮಿಲಿಯನ್ ಟನ್‌ಗಳಿಗೇರಿಕೆಯಾಗಿದೆಯೆನ್ನಲಾಗಿದೆ. CBOT ಯ ಕಾಂಟ್ರಾಕ್ಟ್ ದರ 4 ಶೇಕಡಾ ಹೆಚ್ಚಳವಾಗಿದೆ.

## ಭಾರತದ ಅಕ್ಕಿಗೆ ರಫ್ತು ಬೇಡಿಕೆ ಹೆಚ್ಚಳ

ಹಿಂದಿನೆರಡು ವಾರಗಳಲ್ಲಿ ಭಾರತದ ಅಕ್ಕಿಗೆ ರಫ್ತು ಬೇಡಿಕೆ ತೀವ್ರ ಹೆಚ್ಚಳವಾಗಿದ್ದು 1 ಮಿಲಿಯನ್ ಟನ್‌ಗಳಿಗೂ ಅಧಿಕ ರಫ್ತು ಒಡಂಬಡಿಕೆಗಳಾಗಿವೆಯೆನ್ನಲಾಗಿದೆ. ಅಕ್ಕಿ ರಫ್ತು ನಿರ್ಬಂಧಕ್ಕೊಳಗಾಗುವ ಭಯದಿಂದ ಹಾಗೂ ಇತರ ಸ್ಪರ್ಧಿ ದೇಶಗಳ ಅಕ್ಕಿ ದರಕ್ಕಿಂತ ಗಣನೀಯ ಕಡಿಮೆ ದರವಿರುವುದರಿಂದ ಭಾರತದ ಅಕ್ಕಿಗೆ ಬೇಡಿಕೆ ಹೆಚ್ಚಳವಿದೆ. ಬೇಡಿಕೆ ಹೆಚ್ಚಳದಿಂದ ಈ ವಾರ ಭಾರತದ ಅಕ್ಕಿ ರಫ್ತು ದರ ಹೆಚ್ಚಳವಾಗಿದೆಯೆನ್ನಲಾಗಿದೆ.